**<u>ದಿನಾಂಕ : 18-06-2018 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಸಿ ಪಿ ಡಿ ವಕೀಲರಿಂದ :</u>**

ನಾನು ನನ್ನ ವಾದಕ್ಕೆ ಪೂರಕವಾಗಿ

**1**. ಡ ನಂ **260** ಹಾಜರು ಪಡಿಸಿದ್ದು, ಅದನ್ನು ನಿಪಿ **8** ಎಂದು ಗುರುತಿಸಲಾಯಿತು.

**2.** ಡ ನಂ **301** ಹಾಜರು ಪಡಿಸಿದ್ದು, ಅದನ್ನು ನಿಪಿ **9** ಎಂದು ಗುರುತಿಸಲಾಯಿತು.

**3.** ಡ ನಂ **894** ಹಾಜರು ಪಡಿಸಿದ್ದು, ಅದನ್ನು ನಿಪಿ **10** ಎಂದು ಗುರುತಿಸಲಾಯಿತು.

**4.** ಡ ನಂ **167** ಹಾಜರು ಪಡಿಸಿದ್ದು, ಅದನ್ನು ನಿಪಿ **11** ಎಂದು ಗುರುತಿಸಲಾಯಿತು.

**5.** ಡ ನಂ **473** ಹಾಜರು ಪಡಿಸಿದ್ದು, ಅದನ್ನು ನಿಪಿ **12** ಎಂದು ಗುರುತಿಸಲಾಯಿತು.

**6.** ಡ ನಂ **899** ಹಾಜರು ಪಡಿಸಿದ್ದು, ಅದನ್ನು ನಿಪಿ **13** ಎಂದು ಗುರುತಿಸಲಾಯಿತು.

**7.** ಡ ನಂ **1443** ಹಾಜರು ಪಡಿಸಿದ್ದು, ಅದನ್ನು ನಿಪಿ **14** ಎಂದು ಗುರುತಿಸಲಾಯಿತು.

**8.** ಡ ನಂ **1444** ಹಾಜರು ಪಡಿಸಿದ್ದು, ಅದನ್ನು ನಿಪಿ **15** ಎಂದು ಗುರುತಿಸಲಾಯಿತು.

**9.** ರಿ ಸ ನಂ **33/1 + 2+ 3+ 4/1** ನೇದ್ದರ ಪಹಣಿ ಪತ್ರಿಕೆ ಹಾಜರು ಪಡಿಸಿದ್ದು, ಅದನ್ನು ನಿಪಿ **16** ಎಂದು ಗುರುತಿಸಲಾಯಿತು.

**10.** ರಿ ಸ ನಂ **33/1 + 2+ 3+ 4/2** ನೇದ್ದರ ಪಹಣಿ ಪತ್ರಿಕೆ ಹಾಜರು ಪಡಿಸಿದ್ದು, ಅದನ್ನು ನಿಪಿ **17** ಎಂದು ಗುರುತಿಸಲಾಯಿತು.

**11.** ಎ ಸಿ ಯವರ ಆದೇಶ ಹಾಜರು ಪಡಿಸಿದ್ದು, ಅದನ್ನು ನಿಪಿ **18** ಎಂದು ಗುರುತಿಸಲಾಯಿತು.

ಆದ್ದರಿಂದ ನಮ್ಮ ವಾದ ಪತ್ರದಲ್ಲಿ ಕೇಳಿದಂತೆ ಡಿಕ್ರಿ ಮಾಡಲು ವಿನಂತಿ

**<u>ಪಾಟೀ ಸವಾಲು : ಶ್ರೀ ಎಫ್ ಎಮ್ ಎಮ್ ವಕೀಲರಿಂದ :</u>**

ದಾವಾದ ಆಸ್ತಿಗಳಿಗೆ ಸಂಬಂಧವಾಗಿ ನಮ್ಮ ತಂದೆ ಎ ಸಿ ಕೋರ್ಟನಲ್ಲಿ **2** ಮೇಲ್ಮನವಿಗಳನ್ನು ಸಲ್ಲಿಸಿದ್ದರು ಅಂದರೆ ಸರಿ. ಸದರಿ ಮೇಲ್ಮನವಿಗಳಿಗೆ ಮತ್ತು ವಕಾಲತ್ ನಾಮೆಗೆ ನಮ್ಮ ತಂದೆ ಸಹಿ ಮಾಡಿದ್ದಾರೆ ಅಂದರೆ ಸರಿ. ನಮ್ಮ ತಂದೆ ಯಾವ ವಿಷಯಕ್ಕೆ ಸಂಬಂಧವಾಗಿ ಮೇಲ್ಮನವಿ

ಮಾಡಿದ್ದರು ನನಗೆ ಮಾಹಿತಿ ಇದೆ. ನಮಗೆ ನಮ್ಮ ತಂದೆಯ ತಾಯಿ ಇಂದ ಒಂದು ಆಸ್ತಿ ಬಂದಿತ್ತು ಮತ್ತು ನಮ್ಮ ತಂದೆಯ ತಂದೆಯಿಂದ ಒಂದು ಆಸ್ತಿ ಬಂದಿತ್ತು, ನಮ್ಮ ತಂದೆ ಮತ್ತು ನಮ್ಮ ತಂದೆಯ ಕಕ್ಕಂದಿರರ ಮಕ್ಕಳು ವಾಟ್ನಿ ಮಾಡಿಕೊಳ್ಳುವಾಗ ನಮ್ಮ ತಂದೆಯ ತಂದೆಯಿಂದ ಬಂದ ಆಸ್ತಿಗೆ ಸಂಬಂಧವಾಗಿ ಮಾತ್ರ ವಾಟ್ನಿ ಆಗಬೇಕಾಗಿತ್ತು ಆದರೆ ಅದರಲ್ಲಿ ತಪ್ಪಾಗಿ ನಮ್ಮ ತಂದೆಯ ತಾಯಿ ಇಂದ ಬಂದ ಆಸ್ತಿಯನ್ನೂ ಕೂಡಾ ತಪ್ಪಾಗಿ ಸೇರಿಸಿದ್ದರಿಂದ ಅದನ್ನು ಪ್ರಶ್ನಿಸಿ ನಮ್ಮ ತಂದೆ ಮೇಲ್ಮನವಿ ಮಾಡಿದ್ದರು. ನಮ್ಮ ತಂದೆಯ ತಾಯಿ ಇಂದ ಬಂದ ಆಸ್ತಿಗೆ ಸಂಬಂಧವಾಗಿ ನಮ್ಮ ತಂದೆ ಮೇಲ್ಮನವಿ ಮಾಡಿಲ್ಲ ಅಂದರೆ ಸುಳ್ಳು. ನಮ್ಮ ತಂದೆ ಮತ್ತು ಅವರ ಚಿಕ್ಕಪ್ಪನ ಮಕ್ಕಳು ಸನ್ **1984 -85** ರಲ್ಲಿ ವಾಟ್ನಿ ಮಾಡಿ ಕೊಂಡಿದ್ದಾರೆ. ವಾಟ್ನಿ ಆದ ಪ್ರಕಾರ ಅವರ ಅವರ ಹೆಸರಿನಲ್ಲಿ ಖಾತೆಗಳು ಆಗಿರುತ್ತವೆ ಅಂದರೆ ಸರಿ. ಖಾತೆ ಬದಲಾವಣೆ ಆದ ಬಳಿಕ ತಮ್ಮ ತಮ್ಮ ಹೆಸರಿನ ಆಸ್ತಿಗಳ ಮೇಲೆ ಅವರು ಸಾಲ ವಗೈರೆ ಮಾಡಿದ್ದಾರೆ ಅಂದರೆ ಸರಿ. ಸಾಕ್ಷಿ ಅವರು ಅದನ್ನು ಕಾನೂನು ವಿರುದ್ಧವಾಗಿ ಮಾಡಿಕೊಂಡಿದ್ದಾರೆ ಎಂದು ಹೇಳಿರುತ್ತಾರೆ. ನಮಗೆ ಅವರು ಸಾಲ ಮಾಡಿದ್ದು ಗೊತ್ತಾಗಿಲ್ಲವಾದ್ದರಿಂದ ನಾವು ಅದಕ್ಕೆ ತಕರಾರು ಮಾಡಿಲ್ಲ. ಸನ್ **1984-85** ರಿಂದ ಈವರೆಗೂ ಅವರು ಬೆಳೆ ಸಾಲ ವಗೈರೆ ಮಾಡುತ್ತಾ ಬಂದು ಅದನ್ನು ಮರುಸಂದಾಯ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿ. ಪ್ರತಿವಾದಿಯರು ಸನ್ **1984-85** ರಿಂದ ಸತತವಾಗಿ ಚಿಕ್ಕ ಹಿಡುವಳಿದಾರರಿಗೆ ಸಿಗುವಂತಹ ಸಹಾಯಧನ ಪಡೆಯುತ್ತಾ ಬಂದಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಈಗ **5-6** ವರ್ಷಗಳಿಂದಲೂ ಪ್ರತಿವಾದಿಯರು ತಮ್ಮ ಹೆಸರಿಗೆ ಇರುವ ಆಸ್ತಿಗಳ ಬೆಳೆ ವಿಮೆಗೊಳಿಸಿ ಅದರಿಂದ ಬಂದ ವಿಮಾ ಹಣವನ್ನು ಸ್ವೀಕರಿಸಿಕೊಳ್ಳುತ್ತಿದ್ದಾರೆ ಅಂದರೆ ಸರಿ. ಸಾಕ್ಷಿ ಪ್ರತಿವಾದಿಯರು ಖೊಟ್ಟಿಯಾಗಿ ತಮ್ಮ ಹೆಸರು ದಾಖಲೆಗಳಲ್ಲಿ ಸೇರಿಸಿಕೊಂಡು ಹಾಗೆ ವಿಮಾ ಹಣ ಪಡೆಯುತ್ತಿದ್ದಾರೆ ಎಂದು ಹೇಳಿರುತ್ತಾರೆ. ಪ್ರತಿವಾದಿಯರು ಖೊಟ್ಟಿಯಾಗಿ ಹೆಸರು ಸೇರಿಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಧೂಳಿಕೊಪ್ಪ ಗ್ರಾಮದಲ್ಲಿ ಬಂದ ಹಿಸ್ಸೆಯ ಜಮೀನನ್ನು ತಮ್ಮ ಕಾನೂನು ಬದ್ಧ ಅವಶ್ಯಕತೆಗಳಿಗಾಗಿ ಮಾರಾಟ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಪ್ರತಿವಾದಿಯರು ತಾವು ಆ ಜಮೀನನ್ನು ಲಾವಣಿಯಿಂದ ಹಾಕಿದ ಬಗ್ಗೆ ತಮಗೆ ಹೇಳಿದ್ದರೆಂದು ನುಡಿದಿರುತ್ತಾರೆ. ಅವರು ಲಾವಣಿಯಿಂದ ಹಾಕಿರುವ ಬಗ್ಗೆ ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಖರೀದಿ ಹಿಡಿದವರನ್ನು ಪಾರ್ಟಿ ಮಾಡಿದ್ದೇನೆ. ಖರೀದಿದಾರರು ಖರೀದಿ ಹಿಡಿದ ಬಗ್ಗೆ ಇತ್ತಿತ್ತಲಾಗಿ

ಗೊತ್ತಾಗಿರುತ್ತದೆಂದು ದಾವೆಯಲ್ಲಿ ಬರೆದಿದ್ದೇವೆ. ಆರ್ ಟಿ ಎಸ್ ಅಪೀಲಿನಲ್ಲಿ ಕೂಡಾ ಖರೀದಿದಾರರನ್ನು ಪಾರ್ಟಿ ಮಾಡಲಾಗಿತ್ತು ಅಂದರೆ ಸರಿ. ನಮ್ಮ ಊರಿನಿಂದ ಧೂಳಿಕೊಪ್ಪ ಗ್ರಾಮ ಒಂದು ಕಿ ಮೀ ಆಗುತ್ತದೆ ಅಂದರೆ ಸಾಕ್ಷಿ ಎರಡು ಕಿ ಮೀ ಆಗುತ್ತದೆ ಎಂದು ಹೇಳಿರುತ್ತಾರೆ. ಧೂಳೀಕೊಪ್ಪ ಗ್ರಾಮ ಮುತ್ತೂರು ಗ್ರಾಮ ಪಂಚಾಯತಿಯಲ್ಲಿ ಬರುತ್ತದೆ ಅಂದರೆ ಸರಿ. ನಮ್ಮ ಊರಿನ ಮತ್ತು ಧೂಳಿಕೊಪ್ಪ ಗ್ರಾಮದ ಸೀಮೆ ಒಂದಕ್ಕೊಂದು ತಾಗಿಕೊಂಡಿರುತ್ತವೆ ಅಂದರೆ ಸರಿ. ಸಾಕ್ಷಿ ಸ್ವಇಚ್ಚೆಯಿಂದ ಮಧ್ಯದಲ್ಲಿ ರಸ್ತೆ ಇರುತ್ತದೆಂದು ಹೇಳಿರುತ್ತಾರೆ. ಧೂಳಿಕೊಪ್ಪ ಗ್ರಾಮದ ಆಸ್ತಿಗಳನ್ನು ಖರೀದಿದಾರರು ಸುಮಾರು **15** ವರ್ಷಗಳ ಹಿಂದೆ ಖರೀದಿಸಿದ್ದಾರೆ. **2** ಮತ್ತು **3** ನೇ ಪ್ರತಿವಾದಿಯರು ಸಿವಿಲ್ ಕೋರ್ಟನಲ್ಲಿ ನಮ್ಮ ತಂದೆಯ ವಿರುದ್ಧ ಓ ಎಸ್ ನಂ **122/1991** ನೇದ್ದನ್ನು ಹೂಡಿದ್ದರು ಅಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಂದೆ ಸಾಕ್ಷಿ ನುಡಿದಿದ್ದಾರೆ ಅಂದರೆ ಸರಿ. ನಾನು ಪದವಿ ಮಾಡಿದ್ದೇನೆ. ನಾನು ನಮ್ಮ ತಂದೆಯಿಂದ ಪ್ರತ್ಯೇಕವಾಗಿ ವಾಸ ಇರುತ್ತೇನೆ ಅಂದರೆ ಸರಿಯಲ್ಲ. ನಾನು ಹಂಸಭಾವಿಯಲ್ಲಿ ವಾಸ ಇರುತ್ತಿದ್ದೇನೆ ಅಂದರೆ ಸರಿ. ಸಾಕ್ಷಿ ಸ್ವಇಚ್ಚೆಯಿಂದ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಅಲ್ಲಿ ತಾವು ವಾಸ ಮಾಡುತ್ತಿರುವ ಬಗ್ಗೆ ಹೇಳಿರುತ್ತಾರೆ. ನಾನು ಮಕ್ಕಳ ಶಿಕ್ಷಣಕ್ಕಾಗಿ ಹಂಸಭಾವಿಯಲ್ಲಿ ವಾಸ ಇರುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಊರಿನಿಂದ ಹಂಸಭಾವಿಗೆ ಹುಡುಗರು ಶಾಲೆಗೆ ಹೋಗಿ ಬರುವುದು ಮಾಡುತ್ತಾರೆ ಅಂದರೆ ಸರಿ. ನಾನು ಜಿ ಪಿ ಎ ದ ಸ್ಟಾಂಪನ್ನು ಬ್ಯಾಡಗಿಯಿಂದ ರೂ. **200/-** ಗಳಿಗೆ ಖರೀದಿಸಿದ್ದೇನೆ. ನಾನು ಜಿ ಪಿ ಎ ಬ್ಯಾಡಗಿಯಲ್ಲಿ ಬರೆಸಿದ್ದೇನೆ. ಜಿ ಪಿ ಎ ಗೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ನನಗೆ ನೆನಪು ಇಲ್ಲ. ನಮ್ಮ ತಂದೆಯ ಮತ್ತು ಸಾಕ್ಷಿದಾರರ ಗುರುತು ಬಲ್ಲವರು ಎಂದೂ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಸಾಕ್ಷಿ ನೋಟರಿಯವರೇ ಮಾಡಿದ್ದಾರೆ ಎಂದು ಹೇಳಿದ್ದಾರೆ. (ಪ್ರಸ್ತುತ ದಾವೆಯಲ್ಲಿ ಸಾಕ್ಷಿಯು ಆಧರಿಸಿದ ಜಿ ಪಿ ಎ ವಸ್ತು ವಿಷಯ ಇರುವುದಿಲ್ಲ. ಸದರಿ ಜಿ ಪಿ ಎ ವಿಧ್ಯುಕ್ತವಾಗಿ ಇರುತ್ತದೆಂದು ಕೋರ್ಟು ಪೂರ್ವಭಾವನೆ ಮಾಡಿಕೊಳ್ಳಲು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಮು **85** ಹೇಳುತ್ತದೆಂದು ಮತ್ತು ಸದರಿ ದಾಖಲೆಯ ಬಗ್ಗೆನೇ ಹೆಚ್ಚಿನ ಪ್ರಶ್ನೆಗಳು ಅಸಮಂಜಸ ಆಗಿರುತ್ತದೆಂದು ಮತ್ತು ಆ ದಾಖಲೆಯ ಬಗ್ಗೆಯೇ ಪ್ರಶ್ನೆಗಳನ್ನು ಕೇಳದಂತೆ ವಕೀಲರಿಗೆ ಸೂಚಿಸಲಾಯಿತು. ಅದೇ ರೀತಿ ಸಾಕ್ಷಿಯು ಆಧರಿಸಿದ ಜಿ ಪಿ ಎ ಸುಳ್ಳು ಇದ್ದರೆ ಸದರಿ ಸಂಗತಿಯನ್ನು ಕಾನೂನಿನ ಪ್ರಕಾರ ರುಜುವಾತು ಪಡಿಸಬಹುದೆಂದು ಪ್ರತಿವಾದಿಯರ ಪರ

ವಕೀಲರಿಗೆ ಸೂಚಿಸಲಾಗಿದೆ). ನಮ್ಮ ತಂದೆಗೆ ಕಾಲು, ಮಂಡಿ ಸರಿಯಾಗಿ ನಡೆದಾಡಲು ಆಗದೇ ಇದ್ದುದರಿಂದ ಅವರು ನನ್ನ ಹೆಸರಿಗೆ ಜಿ ಪಿ ಎ ಬರೆದು ಕೊಟ್ಟಿದ್ದಾರೆ. ಜಿ ಪಿ ಎ ದಲ್ಲಿ ಕಾಲು, ಮಂಡಿ ಸರಿ ಇಲ್ಲವೆಂದು ಬರೆದಿಲ್ಲ ಅಂದರೆ ಸರಿಯಲ್ಲ. ಯಾವ ಆಸ್ತಿಗಳು ಯಾರ ಹಿಸ್ಸೆಗೆ ಹೋಗಿರುತ್ತವೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸುಳ್ಳು. ದಾವಾದ ಆಸ್ತಿಗಳು ಈ ಮೊದಲು ಮಾಯಪ್ಪ ಕರಿಯಪ್ಪ ಉಪ್ಪಣಸಿ ಮತ್ತು ಸಣ್ಣಪ್ಪ ಕರಿಯಪ್ಪ ಉಪ್ಪಣಸಿ ಇವರ ಹೆಸರಿನಲ್ಲಿ ಇದ್ದವು. ವಕೀಲರು ಸಾಕ್ಷಿಗೆ ಮಾಯಪ್ಪ ಮತ್ತು ಸಣ್ಣಪ್ಪ ಇವರು ನಿಮ್ಮ ಮತ್ತು **1** ರಿಂದ **3** ನೇ ಪ್ರತಿವಾದಿಯರ ಘರಾಣೆಯ ಹಿರಿಯರು ಅಂದರೆ ಸರಿಯಲ್ಲ. ನಾನು ಇದನ್ನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. **1** ನೇ ಪ್ರತಿವಾದಿಗೆ ತೆಲೆ ಸರಿ ಇದ್ದಿರಲಿಲ್ಲ ಅಂದರೆ ಸರಿ. ವಕೀಲರು ಸಾಕ್ಷಿಗೆ ಪ್ರಶ್ನೆ ಕೇಳುವಾಗ ಸಾಕ್ಷಿಯು **1** ನೇ ಪ್ರತಿವಾದಿ ಮರಣ ಹೊಂದಿರುತ್ತಾರೆ ಎಂದು ಹೇಳಿದರು. ವಾದಿ ಪರ ವಕೀಲರು ತಮಗೆ **1** ನೇ ಪ್ರತಿವಾದಿ ಮರಣ ಹೊಂದಿದ ವಿಷಯ ಗೊತ್ತಿರಲಿಲ್ಲ ಎಂದು ಆ ಬಗ್ಗೆ ಸ್ಟೆಪ್ಸ ತೆಗೆದುಕೊಳ್ಳಲು ಕಾಲಾವಕಾಶ ಕೇಳಿಕೊಂಡರು. ಕಾಲಾವಕಾಶ ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೆ.ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.